ಓ ಎಸ್ ನಂ.66/2021
ಪಿ.ಡಬ್ಲ್ಯೂ-1 ವಿಜಯಲಕ್ಷ್ಮೀ ಗಂಡ ರಮೇಶ ಬಡಿಗೇರ

(ಇಂದು ದಿನಾಂಕಃ **31-01-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ ಎಸ್ ಬಿ ವಕೀಲರಿಂದ.

ಈ ದಾವೆಯಲ್ಲಿ ಒಟ್ಟು ೨೪ ಎಕರೆ ಜಮೀನು ಇರುತ್ತದೆ. ದಾವಾ ಜಮೀನಿನ ಸುತ್ತ-ಮುತ್ತ ಇರುವ ಜಮೀನುಗಳು ಯಾರದ್ದು ಇದೆ ಎಂದು ನನಗೆ ಗೊತ್ತು, ಅದನ್ನು ಈ ದಾವೆಯಲ್ಲಿ ಬರೆಸಲು ನನಗೆ ಗೊತ್ತಾಗಿರುವುದಿಲ್ಲ. ೧ನೇ ಪ್ರತಿವಾದಿಗೆ ನಾನು ತಂಗಿಯಾಗಿರುತ್ತೇನೆ. ಬಂಗಾರೆವ್ವ ನನ್ನ ಅಣ್ಣನ ಹೆಂಡತಿಯಾಗಿರುತ್ತಾರೆ. ೩ನೇ ಪ್ರತಿವಾದಿ ಬಂಗಾರೆವ್ವರವರ ಗಂಡನ ಹೆಸರು ಭೀಮಶಾ ಆಗಿರುತ್ತದೆ. ಪ್ರತಿವಾದಿ ನಂಬರ ೪ ರಿಂದ ೭ ರವರು ನನ್ನ ಅಣ್ಣನಾದ ಭೀಮಶಾನ ಮಕ್ಕಳಾಗಿರುತ್ತಾರೆ. ದಾವಾ ಆಸ್ತಿಗಳು ಹಿರಿಯರಿಂದ ಬಂದಿರುತ್ತವೆ ಎಂದು ತೋರಿಸಲು ನನ್ನ ಹತ್ತಿರ ದಾಖಲೆಗಳು ಇಲ್ಲ. ೩ನೇ ಪ್ರತಿವಾದಿ ನನಗೂ ಮತ್ತು ಪ್ರತಿವಾದಿಗಳಿಗೆ ಸಂಬಂಧಪಟ್ಟಿರುತ್ತಾನೆ ಎಂದರೆ ಸರಿ.

೨. ನಾನು ಮತ್ತು ಪ್ರತಿವಾದಿಗಳು ಎಲ್ಲರೂ ಕೂಡಿ ವಾಸ ಇರುವುದಿಲ್ಲ. ನಾವು ಹಿಂದೂ ಕುಟುಂಬದ ಜಂಟಿ ಸದಸ್ಯರಾಗಿರುತ್ತೇವೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಗಂಡನ ಮನೆಯಲ್ಲಿ ಇರುತ್ತೇನೆ ಎನ್ನುತ್ತಾರೆ. ಭೀಮಶಾರವರಿಗೂ ಮತ್ತು ನನಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

೩. ಪಾರ್ವತಿ ಮತ್ತು ಸಲಬವ್ವ ಭೀಮಶಾರವರ ಮಕ್ಕಳು ಎಂದರೆ ಸರಿ. ಸಾಕ್ಷಿಯು ನನ್ನ ಅಜ್ಜನ ಹೆಸರೂ ಕೂಡಾ ಭೀಮಶಾನೆ ಆಗಿರುತ್ತದೆ ಎನ್ನುತ್ತಾರೆ. ನನ್ನ ಅಜ್ಜ ಭೀಮಶಾರವರಿಗೆ

ಜಮೀನು ಇತ್ತು. ನನ್ನ ಅಜ್ಜ ಭೀಮಶಾ ಈಗ ಮೃತರಾಗಿರುತ್ತಾರೆ. ನನ್ನ ಅಣ್ಣ ಭೀಮಶಾ ಕೂಡಾ ಈಗ ಮೃತರಾಗಿರುತ್ತಾರೆ. ನನ್ನ ಅಜ್ಜ ಭೀಮಶಾ ಮೃತರಾದ ನಂತರ ಅವರ ಮಕ್ಕಳಾದ ಪಾರ್ವತಿ ಮತ್ತು ಸಲಬವ್ವರವರು ಜಮೀನುಗಳನ್ನು ಹಂಚಿಕೊಂಡಿರುತ್ತಾರೆ. ಅವರ ಹೆಸರಿನಲ್ಲಿ ಪಹಣಿಗಳೂ ಕೂಡಾ ಆಗಿವೆ ಎಂದರೆ ಸರಿ. ಅವರು ಇಬ್ಬರು ಸರಿಯಾಗಿ ಅರ್ಧ-ಅರ್ಧ ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಭೀಮಶಾರವರಿಗೆ ಪಾರ್ವತಿ ಮತ್ತು ಸಲಬವ್ವ ಬಿಟ್ಟು ಬೇರೆ ಯಾರೂ ವಾರಸುದಾರರು ಇಲ್ಲ ಎಂದರೆ ಸರಿ. ಸರ್ವೆ ನಂಬರ ೧೧೦ ರಲ್ಲಿ ೬ ಎಕರೆ ೧೦ ಗುಂಟೆ ಜಮೀನು ಇರುತ್ತದೆ. ಸರ್ವೆ ನಂಬರ ೧೧೦ ರಲ್ಲಿ ೬ ಎಕರೆ ೧೮ ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ಪಾರ್ವತಿ ಮತ್ತು ಸಲಬವ್ವರವರ ಹೆಸರಿನಲ್ಲಿತ್ತು, ಈಗ ಅವರು ಅದನ್ನು ಮಾರಾಟ ಮಾಡಿರುತ್ತಾರೆ.

೪. ನನ್ನ ತಂದೆಯ ಹೆಸರು ಮಲ್ಲೇಶಪ್ಪ ಕುಂಬಾರ ಆಗಿರುತ್ತದೆ. ಪಾರ್ವತಿರವರ ಗಂಡನ ಹೆಸರು ಶಿವರಾಯ ಆಗಿರುತ್ತದೆ. ನಾನು ಶಿವರಾಯ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರು ಸಲಬವ್ವ ಆಗಿರುತ್ತದೆ. ನನ್ನ ತಾಯಿ ಸಲಬವ್ವರವರು ೧೯೯೯ ರಲ್ಲಿ ಮೃತರಾಗಿರುತ್ತಾರೆ. ನಮ್ಮ ತಾಯಿ ತೀರಿದ ನಂತರ ನಾನು ಪಾಲು ಕೇಳಿಲ್ಲ, ಈಗ ಕೇಳಿರುತ್ತೇನೆ. ನಾನು ಪಾರ್ವತಿರವರನ್ನು ಮೊದಲು ಪಾಲು ಕೇಳಿಲ್ಲ. ನಾನು ಪಾಲು ಕೇಳಿಲ್ಲ ಮತ್ತು ನನಗೆ ಪಾಲು ಕೊಡುತ್ತೇನೆ ಎಂದು ಹೇಳಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಪಾಲು ಕೊಡುತ್ತೇನೆ ಎಂದು ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪಾಲು ಕೊಡುತ್ತೇನೆ ಎಂದು ಮುಂದೆ ಹಾಕುತ್ತಾ ಬಂದಿದ್ದರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

೫. ನನ್ನ ಅಣ್ಣ ಭೀಮಶಾರವರು ೨೦೦೪ ರಲ್ಲಿ ಮೃತರಾಗಿರುತ್ತಾರೆ. ೭ನೇ ಪ್ರತಿವಾದಿ ಭಾಗ್ಯಶ್ರೀ ನನ್ನ ಅಣ್ಣನ ಮಗಳಾಗಿರುತ್ತಾಳೆ. ೩ ರಿಂದ ೭ನೇ ಪ್ರತಿವಾದಿಗಳು ಪಾರ್ವತಿರವರನ್ನು ಪಾಲು ಕೇಳಿರುವುದಿಲ್ಲ. ಪಾರ್ವತಿ ಪಾಲು ಕೊಡುತ್ತೇನೆ ಎಂದು ಮುಂದಾಕಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪಾರ್ವತಿ ನನಗೆ ಪಾಲು ಕೊಡುತ್ತೇನೆ ಎಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಂತಾಬಾಯಿ ಕೂಡಾ ನನ್ನ ಅಣ್ಣನಾದ ಭೀಮಶಾರವರ ಹೆಂಡತಿಯಾಗಿರುತ್ತಾರೆ. ಮಲ್ಲೇಶಪ್ಪರವರಿಗೆ ಬಂಗಾರೆವ್ವ ಮತ್ತು ಶಾಂತಾಬಾಯಿರವರು ಸೊಸೆಯಂದಿರು ಆಗಿರುತ್ತಾರೆ. ನನಗೂ ಮತ್ತು ಭೀಮಶಾರವರಿಗೂ ಯಾವುದೆ ಸಂಬಂಧ ಇಲ್ಲ ಮತ್ತು ನನಗೆ ಯಾವುದೆ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ.

೬. ಸರ್ವೆ ನಂಬರ ೨೩೦ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಗೊತ್ತಾಗದಂತೆ ನಾವು ಮುಟೇಷನ್ ಮಾಡಿಕೊಂಡಿರುತ್ತೇವೆ ಎಂದರೆ ಅದು ನನಗೆ ಗೊತ್ತಾಗುವುದಿಲ್ಲ. ನನಗೆ ಗೊತ್ತಾಗದಂತೆ ಪ್ರತಿವಾದಿಗಳು ಪಹಣಿ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕಾನೂನುಬಾಹಿರವಾಗಿ ಪಹಣಿಗಳನ್ನು ಮಾಡಿಕೊಂಡು ಜಮೀನು ಮಾರಾಟ ಮಾಡುವ ಪ್ರಯತ್ನ ಮಾಡಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳಲ್ಲಿ ನನಗೆ ಹಕ್ಕು ಇದೆ ಎಂದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಆದೇಶ ೩೯ ನಿಯಮ ೧ ಮತ್ತು ೨ ರಲ್ಲಿ ಒಂದು ಸುಳ್ಳು ಅರ್ಜಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳನ್ನು ಪಾಲು ಕೇಳಿಲ್ಲ ಎಂದರೆ ಸಾಕ್ಷಿಯು ಅವರು ಮಾರಾಟ ಮಾಡಿದ ನಂತರ ನಾನು ದಾವೆ ಹಾಕಿರುತ್ತೇನೆ ಎನ್ನುತ್ತಾರೆ. ನಾನು ಒಂದು ಸುಳ್ಳು ವ್ಯಾಜ್ಯಕಾರಣವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

೭. ದಾವಾ ಆಸ್ತಿಗಳು ಹಿರಿಯರ ಆಸ್ತಿಗಳಿರುತ್ತವೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸತ್ಯ ಸಂಗತಿಗಳನ್ನು ಮುಚ್ಚಿಟ್ಟು ಸುಳ್ಳು ಸಂಗತಿಗಳನ್ನು ಹೇಳಿ, ಒಂದು ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ಎಲ್ಲಾ ಪಕ್ಷಗಾರರನ್ನು ನಾನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ವಂಶಾವಳಿ ದಾಖಲೆಗಳನ್ನು ಕಂದಾಯಾಧಿಕಾರಿಗಳಿಂದ ಪಡೆದು ಸಲ್ಲಿಸಿರುವುದಿಲ್ಲ. ನಾನು ಸುಳ್ಳು ಸಂಬಂಧಗಳನ್ನು ತೋರಿಸಿ ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.